# ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು

**ದಿನಾಂಕ : 06.06.2023**

## : ಪತ್ರಿಕಾ ಪ್ರಕಟಣೆ :

**"ವಿಶ್ವ ಪರಿಸರ ದಿನಾಚರಣೆ"ಯ** ಅಂಗವಾಗಿ ದಿನಾಂಕ **05.06.2023** ರಂದು ಬೆಂಗಳೂರಿನ ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿ ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

**ಗೌರವಾನ್ವಿತ ಶ್ರೀ ನ್ಯಾಯಮೂರ್ತಿ ಪ್ರಸನ್ನ ಬಿ.ವರಾಳೆ,** ಮುಖ್ಯ ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಪ್ರಧಾನ ಪೋಷಕರು, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ರವರು ಸಮಾರಂಭವನ್ನು ಉದ್ಘಾಟಿಸಿದರು. **ಗೌರವಾನ್ವಿತ ಶ್ರೀ ನ್ಯಾಯಮೂರ್ತಿ ಕೆ.ಸೋಮಶೇಖರ್,** ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಅಧ್ಯಕ್ಷರು, ಉಚ್ಚ ನ್ಯಾಯಾಲಯ ಕಾನೂನು ಸೇವೆಗಳ ಸಮಿತಿ ರವರು ಗೌರವಾನ್ವಿತ ಮುಖ್ಯ ನ್ಯಾಯಮೂರ್ತಿಗಳೊಂದಿಗೆ ಭಾಗವಹಿಸಿದ್ದರು.

ಗೌರವಾನ್ವಿತ ಮುಖ್ಯ ನ್ಯಾಯಮೂರ್ತಿಗಳು ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದ ಆವರಣದಲ್ಲಿ ಸಸಿ ನೆಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.





ಗೌರವಾನ್ವಿತ ಮುಖ್ಯ ನ್ಯಾಯಮೂರ್ತಿಗಳು ಕಾರಾಗೃಹದೊಳಗೆ ಹೊಸ 'ಅಡಿಕೆ ಎಲೆ ಉತ್ಪನ್ನಗಳ ಉತ್ಪಾದನಾ ಘಟಕ'ವನ್ನು ಉದ್ಘಾಟಿಸಿದರು. ಪರಿಸರ ದಿನಾಚರಣೆಯಂದು ಈ ಘಟಕವನ್ನು ಉದ್ಘಾಟನೆ ಮಾಡಿರುವುದು ಪರಿಸರ ಸ್ನೇಹಿ ಪರಿಸರವನ್ನು ಉತ್ತೇಜಿಸುವ ಮತ್ತು ಪ್ಲಾಸ್ಟಿಕ್ ಅನ್ನು ನಿಷೇಧಿಸುವ ಉತ್ತಮ ಸಂಕೇತವಾಗಿದೆ ಎಂದು ತಿಳಿಸಿದರು. ಈ ಉತ್ಪಾದನೆಗೆ ಮೂರು ಹೊಸ ಯಂತ್ರಗಳನ್ನು ಇರಿಸಿದ್ದು, ಜೈಲಿನ ಆರು ಖೈದಿಗಳನ್ನು ಅಡಿಕೆ ಎಲೆಯ ತಟ್ಟೆಗಳು, ಗ್ಲಾಸ್‌ಗಳು ಇತ್ಯಾದಿಗಳ ಉತ್ಪಾದನೆಗೆ ನಿಯೋಜಿಸಲಾಗಿದೆ. ಗೌರವಾನ್ವಿತ ಮುಖ್ಯ ನ್ಯಾಯಮೂರ್ತಿಗಳು ಜೈಲಿನ ವಿವಿಧ ಉದ್ಯಮಗಳಾದ ಮರಗೆಲಸ, ಕೈಮಗ್ಗ, ಬೇಕರಿ ಇತ್ಯಾದಿ ಘಟಕಗಳಿಗೆ ಭೇಟಿ ನೀಡಿದರು.







ಗೌರವಾನ್ವಿತ ಮುಖ್ಯ ನ್ಯಾಯಮೂರ್ತಿಗಳು ಜೈಲಿನ ಅಡುಗೆ ಕೋಣೆಗೆ ಭೇಟಿ ನೀಡಿ, ಅಲ್ಲಿನ ಸ್ವಚ್ಛತೆ ಮತ್ತು ನೈರ್ಮಲ್ಯ ನಿರ್ವಹಣೆಯ ಬಗ್ಗೆ ಕಾರಾಗೃಹದ ಅಧಿಕಾರಿಗಳ ಕೆಲಸವನ್ನು ಶ್ಲಾಘಿಸಿದರು.







ವೇದಿಕೆ ಕಾರ್ಯಕ್ರಮದಲ್ಲಿ **ಶ್ರೀ ವಿವೇಕ್ ಸುಬ್ಬಾ ರೆಡ್ಡಿ,** ಅಧ್ಯಕ್ಷರು, ವಕೀಲರ ಸಂಘ, ಬೆಂಗಳೂರು ಅವರು ಪರಿಸರ ಸಂರಕ್ಷಣೆ ಮತ್ತು ಅದರ ಪ್ರಯೋಜನಗಳ ಬಗ್ಗೆ ಜೈಲಿನ ಕೈದಿಗಳಿಗೆ ಅರಿವು ಮೂಡಿಸಿದರು.



**ಗೌರವಾನ್ವಿತ ಶ್ರೀ ನ್ಯಾಯಮೂರ್ತಿ ಕೆ. ಸೋಮಶೇಖರ್,** ನ್ಯಾಯಾಧೀಶರು, ಕರ್ನಾಟಕ ಉಚ್ಚ ನ್ಯಾಯಾಲಯ ರವರು ಪರಿಸರ ಸಂರಕ್ಷಣೆ ಮತ್ತು ಅದರ ಪ್ರಯೋಜನಗಳ ಮಹತ್ವವನ್ನು ಒತ್ತಿ ಹೇಳಿದರು ಮತ್ತು ಜೈಲಿನ ಕೈದಿಗಳಿಗೆ ಜೈಲು ಗ್ರಂಥಾಲಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತೆ ಮತ್ತು ವಿವಿಧ ಕ್ಷೇತ್ರಗಳಲ್ಲಿ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಂಡು ಅಪರಾಧ ಮಾಡುವುದನ್ನು ತಪ್ಪಿಸುವಂತೆ ಸೂಚಿಸಿದರು.

ಗೌರವಾನ್ವಿತ ಮುಖ್ಯ ನ್ಯಾಯಮೂರ್ತಿಗಳು ತಮ್ಮ ಭಾಷಣದಲ್ಲಿ ಪರಿಸರ ನಮ್ಮ ತಾಯಿ ಮತ್ತು ಪರಿಸರವನ್ನು ರಕ್ಷಿಸುವುದು ನಮ್ಮ ಕರ್ತವ್ಯವಾಗಿದ್ದು, ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಿಸಬೇಕೆಂದು ಖೈದಿಗಳಿಗೆ ಮನವರಿಕೆ ಮಾಡಿದರು. ಉತ್ತಮ ಭವಿಷ್ಯಕ್ಕಾಗಿ ಹೆಚ್ಚು ಹೆಚ್ಚು ಸಸಿಗಳನ್ನು ನೆಡುವಂತೆ ಗೌರವಾನ್ವಿತ ಮುಖ್ಯ ನ್ಯಾಯಮೂರ್ತಿಗಳು ಸಭೆಗೆ ಕರೆ ನೀಡಿದರು. ಕೈಮಗ್ಗ ಘಟಕವನ್ನು ಶ್ಲಾಘಿಸುವ ಮೂಲಕ ಜೈಲಿನಲ್ಲಿ ತಯಾರಾಗುವ ಸಮವಸ್ತ್ರಗಳನ್ನು ಸರ್ಕಾರಿ ಶಾಲೆಗಳಿಗೆ ವಿತರಿಸಲು ಜೈಲು ಪ್ರಾಧಿಕಾರದೊಂದಿಗೆ ಕೈಜೋಡಿಸುವಂತೆ ಅಧ್ಯಕ್ಷರು ವಕೀಲರ ಸಂಘಕ್ಕೆ ಗೌರವಾನ್ವಿತ ಮುಖ್ಯ ನ್ಯಾಯಮೂರ್ತಿಗಳು ಮನವಿ ಮಾಡಿದರು. ಜೈಲಿನಲ್ಲಿ ಕಲಿತ ಕೌಶಲಗಳನ್ನು ತಮ್ಮ ಮುಂದಿನ ಜೀವನದಲ್ಲಿ ಬಳಸಿಕೊಳ್ಳುವಂತೆ ಖೈದಿಗಳಿಗೆ ಕಿವಿಮಾತು ಹೇಳಿದರು.





ಈ ಸಂದರ್ಭದಲ್ಲಿ **ಶ್ರೀ ಮನೀಶ್ ಖರಿಬಿಕರ್,** ಮಹಾನಿರ್ದೇಶಕರು, ಕಾರಾಗೃಹ ಮತ್ತು ಸುಧಾರಣಾ ಸೇವೆಗಳು, **ಶ್ರೀ ಕೆ.ಎಸ್. ಭರತ್ ಕುಮಾರ್,** ವಿಲೇಖನಾಧಿಕಾರಿಗಳು, ಕರ್ನಾಟಕ ಉಚ್ಚ ನ್ಯಾಯಾಲಯ, **ಶ್ರೀ ಟಿ.ಜಿ.ರವಿ,** ಪ್ರಧಾನ ಕಾರ್ಯದರ್ಶಿ, ವಕೀಲರ ಸಂಘ, ಬೆಂಗಳೂರು, **ಶ್ರೀ ಹರೀಶ ಎಂ.ಟಿ.,** ಖಜಾಂಚಿ, ವಕೀಲರ ಸಂಘ, ಬೆಂಗಳೂರು, **ಶ್ರೀ ಜೈಶಂಕರ್,** ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, **ಶ್ರೀ ಸೋಮಶೇಖರ್,** ಡಿಐಜಿ, ಕಾರಾಗೃಹಗಳು, **ಶ್ರೀ ಆನಂದರೆಡ್ಡಿ,** ಎಐಜಿ, ಕಾರಾಗೃಹಗಳು ರವರುಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**ಶ್ರೀ ಪಿ.ಎಸ್. ರಮೇಶ್,** ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ, ಪರಪ್ಪನ ಅಗ್ರಹಾರ ರವರು ಗಣ್ಯರನ್ನು ಸ್ವಾಗತಿಸಿದರು. **ಡಾ. ಮಲ್ಲಿಕಾರ್ಜುನ ಸ್ವಾಮಿ,** ಅಧೀಕ್ಷಕರು, ಕೇಂದ್ರ ಕಾರಾಗೃಹ, ಪರಪ್ಪನ ಅಗ್ರಹಾರರವರು ಗಣ್ಯರನ್ನು ವಂದಿಸಿದರು.

******